**M.V.C.No. 350/2025**
**RW: 1**

**ಸಾಕ್ಷಿಯನ್ನು ದಿಃ *25/03/2026* ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಃ ಎದುರುದಾರರ ಪರ ವಕೀಲರಿಂದ.**

ನಾನು ಮುಖ್ಯ ವಿಚಾರಣೆಯಾಗಿ ನನ್ನ ಪ್ರಮಾಣಪತ್ರವನ್ನು ಸಲ್ಲಿಸಿದ್ದೇನೆ. ಅದರಲ್ಲಿನ ಸಂಗತಿಗಳು ಸತ್ಯವಾಗಿವೆ.

ನಾನು ನ್ಯಾಯಾಲಯಕ್ಕೆ ಈ ಕೆಳಗಿನ ದಾಖಲೆಗಳನ್ನು ಹಾಜರುಪಡಿಸುತ್ತಿದ್ದೇನೆ.

| ಅ.ನಂ. | ದಾಖಲೆಗಳು |
|---|---|
| **ನಿ.ಆರ್.1** | ಅಧಿಕಾರ ಪತ್ರ |
| **ನಿ.ಆರ್.2** | ವಿಮೆ ಪ್ರತಿ |

ಆದುದರಿಂದ ಪ್ರಮಾಣಪತ್ರ ಮತ್ತು ದಾಖಲೆಗಳನ್ನು ಪರಿಶೀಲಿಸಿ ಅರ್ಜಿಯನ್ನು ವಜಾ ಮಾಡಬೇಕಾಗಿ ವಿನಂತಿ.

***ಪಾಟೀ ಸವಾಲು ಃ ಶ್ರೀ ಎಸಎಸಕೆ ವಕೀಲರಿಂದ ಅರ್ಜಿದಾರರ ಪರವಾಗಿ.***

ಅಪಘಾತವಾದಾಗ ನಮ್ಮ ವಾಹನದ ವಿಮೆ ಮತ್ತು ವಾಹನದ ಚಾಲಕನಿಗೆ ಸೂಕ್ತವಾದ ಚಾಲನಾ ಪರವಾನಿಗೆ ಪತ್ರವಿತ್ತು ಎಂಬ ಪ್ರಶ್ನೆಗೆ ಸಾಕ್ಷಿದಾರರು ವಿಮೆ ಇತ್ತು ಆದರೆ ಚಾಲನಾ ಪರವಾನಿಗೆ ಪತ್ರವಿರಲಿಲ್ಲ ಎಂದು ಉತ್ತರಿಸುತ್ತಾರೆ. ಈ ರೀತಿ ಚಾಲಕನಿಗೆ ಸೂಕ್ತವಾದ ಚಾಲನಾ ಪರವಾನಿಗೆ ಪತ್ರವಿಲ್ಲವೆಂದು ಪೊಲೀಸ ದಾಖಲೆಗಳಲ್ಲಿ ನಮೂದು ಇರುವುದಿಲ್ಲ ಎಂದರೆ ನಿಜ. ಆದ್ದರಿಂದ ಚಾಲಕನಿಗೆ ಸೂಕ್ತವಾದ ಚಾಲನಾ ಪರವಾನಿಗೆ ಪತ್ರವಿದ್ದರೂ ಸಹ ಅಪಘಾತ ದಿನದಂದು ಚಾಲನಾ ಪರವಾನಿಗೆ ಪತ್ರವಿರಲಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ರೀತಿ ಇರುವಾಗ ಅರ್ಜಿದಾರರಿಗೆ ಪರಿಹಾರ ಹಣ ಕೊಡಲು ನಮ್ಮ ವಿಮೆ ಕಂಪನಿಯವರು ಬಾದ್ಯಸ್ಥರು ಎಂದರೆ ಸರಿಯಲ್ಲ.

***ಮರು ವಿಚಾರಣೆ ಃ ಇಲ್ಲ.***

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

1 ನೇ ಹೆ ಹಿ ದಿ ನ್ಯಾ ಹಾಗೂ ಸಿಜೆಎಂ,
ಧಾರವಾಡ.